ಬೇಕಪ್ಪ!'' ಎಂದು ತಮ್ಮಷ್ಟಕ್ಕೆ ತಾವೇ ನಿಟ್ಟುಸಿರು ಬಿಡುತ್ತಿದ್ದರು. ಕ್ರಾಂತಿಯ ಆಂದೋಲನ ನಡೆದಾಗ ಅದರಲ್ಲಿ ಭಾಗವಹಿಸುವವರಲ್ಲಿ ಜನಜಂಗುಳಿಯೂ ಇದ್ದೇ ಇರುವದರಿಂದ ವಿವಿಧ ರೀತಿಯ ಜನ ಈ ಸಾರೆ ಜೇಲಿಗೆ ಬಂದಿದ್ದರು. ಬೀಡಿ ಸೇದುವವರು, ತಂಬಾಕ ತಿನ್ನುವವರು, ನಸ್ಯ ಏರಿಸುವವರು ಮುಂತಾದ ಹಲವಾರು ಚಟಗಳಿದ್ದವರೂ ಆವರಲ್ಲಿ ಸ್ವಾಭಾವಿಕವಾಗಿಯೇ ಅನೇಕರಿದ್ದರು. ವಿಸಾಪೂರ ಜೇಲಿನಲ್ಲಿ ಗಾಂಜಿ ಸೇದುವವರೂ ಒಬ್ಬರಿದ್ದರು. ಸಂಯಮ ವೃತ್ತಿಯ ಕಾರ್ಯಕರ್ತರಿಗೆ ಜೇಲಿನಲ್ಲಿ ವಿಶೇಷ ತೊಂದರೆ ಯಾಗುವದಿಲ್ಲ. ಅದರೆ ಸಾಮಾನ್ಯ ಜೀವಿಗಳಿಗೆ ಜೇಲುಗಳು ಭಾರಿ ಭಯಾನಕವಾಗಿದ್ದವು. ಜಾತ್ರೆಯಂತೆ ಜನ ಜೇಲಿನಲ್ಲಿ ತುಂಬಿದ್ದರಿಂದಲೇ ಒಬ್ಬರನ್ನು ನೋಡಿ ಇನ್ನೊಬ್ಬರು ಇದ್ದುದರಲ್ಲಿಯೇ ಸಮಾಧಾನಪಟ್ಟುಕೊಳ್ಳುತ್ತಿದ್ದರು. ಆದರೂ ತಿಂಗಳುಗಟ್ಟಲೆ ವರುಷ ಗಟ್ಟಲೆ ಮೇಲೆ ವರ್ಣಿಸಿದ ಸ್ಥಿತಿಯಲ್ಲಿ ಜೇಲಿನಲ್ಲಿ ಕಾಲಕಳೆಯುವದು ಸುಲಭವಾಗಿದ್ದಿಲ್ಲ. ಅವರ ಮನಸ್ಥಿತಿಯನ್ನು ಅರಿತು ದುರ್ಬಲತೆಯುಳ್ಳ ಅವರನ್ನು ಹೆಚ್ಚಾಗಿ ಅವರಿಸದಂತೆ ನೋಡುವದೂ ನಿಷ್ಠಾವಂತ ಕಾರ್ಯಕರ್ತರ, ಮುಖಂಡರ ಕರ್ತವ್ಯವಾಗಿತ್ತು. ಆದರೆ ಎಲ್ಲರೂ ಜೇಲಿನಲ್ಲಿಯೇ ಇದ್ದಾಗ ಮುಖಂಡರಾದರೂ ಮಾಡುವದೇನು ?

## ಜೇಲಿನಲ್ಲಿ ಉಂಡಿ ಕಡಬುಗಳು !

ಈ ಆಂದೋಲನದಲ್ಲಿ ಜೇಲಿಗೆ ಹೋದವರಲ್ಲಿ ಶಿಕ್ಷೆ ಆದವರು ಸ್ಥಾನಬದ್ಧರು ಹೀಗೆ ಎರಡು ಪ್ರಕಾರದ ಕೈದಿಗಳಿದ್ದರು. ಶಿಕ್ಷೆ ಆದವರಲ್ಲಿ "ಬ" ಮತ್ತು "ಕ" ಹೀಗೆ ಎರಡು ವರ್ಗದವರೂ, ಸ್ಥಾನಬದ್ಧರಲ್ಲಿ ೧ ನೇ ವರ್ಗ ಎರಡನೇ ವರ್ಗ ಹೀಗೆ ಎರಡು ವರ್ಗದವರೂ ಇದ್ದರು. ಅವೆರನ್ನೆಲ್ಲ ಜೇಲಿನಲ್ಲಿಯ ಬೇರೆ ಬೇರೆ ಕಡೆಗೆ ಇಡುತ್ತಿದ್ದರು. ಜೇಲಿನಲ್ಲಿಯ ಕ್ವಾರಂಟಾಯಿನ್ ಹಾಗು ಅಂಡರ ಟ್ರಾಯಲ ವಾರ್ಡಗಳಲ್ಲಿ ೧ ನೇ ವರ್ಗದ ಸ್ಥಾನಬದ್ಧರನ್ನು ಇಟ್ಟಿದ್ದರು. ಉಳಿದವರನ್ನು ಸರ್ಕಲಗಳಲ್ಲಿ ಇಟ್ಟಿದ್ದರು. ಶಿಕ್ಷೆ ಆದವಂಗೆ ಮುಂಜಾನೆ ಜೋಳದ ಹಿಟ್ಟಿನ ಗಂಜಿ, ಮಧ್ಯಾಹ್ನ ಎರಡು ಜೋಳದ ರೊಟ್ಟಿ ಬ್ಯಾಳಿ, ಸಂಜೆಗೆ ರೊಟ್ಟಿ ಜೊತೆಗೆ ತೆಳ್ಳನ ಹಸರಾಣಿ ಭಾಜಿ ( ಪಲ್ಯ ) ಹೀಗೆ ಆಹಾರ ಕೊಡುತ್ತಿದ್ದರು.

ಸ್ಥಾನಬದ್ಧರಿಗೆ ತಮ್ಮ ಮನೆಯಿಂದ ಬೇಕಾದದ್ದನ್ನು ತರಿಸಿಕೊಳ್ಳಲು ಪ್ರತಿಬಂಧ ವಿದ್ದಿಲ್ಲ. ತಮ್ಮ ಮನೆಯ ಅರವೆ ಅಂಚಡಿ, ಹಾಸಿಗೆ ಹೊದಿಕೆ, ಬೀಡಿ ಸಿಗರೇಟು ನಾಸೀ ಪಂಡಿ, ಚಹಾ, ಕಾಫಿ, ಬ್ರೆಡ್, ಬಿಸ್ಕೀಟು, ಎಣ್ಣೆ, ತುಪ್ಪ, ಉಂಡಿ, ಅಪಲಕ್ಕಿ ಮುಂತಾದ ಬೇಕಾದ ವಸ್ತುಗಳನ್ನು ತಮ್ಮ ಖರ್ಚಿನಿಂದ ತರಿಸಿಕೊಳ್ಳಲು ಅವರಿಗೆ

ಆಸ್ಪದವಿತ್ತು. ಇದಲ್ಲದೆ ಜೇಲಧಿಕಾರಿಗಳು ಅವರಿಗಾಗಿ ಬೇರೆ ಅಡಿಗೆ ಮಾಡಿಕೊಳ್ಳಲೂ ಅವಕಾಶ ಕೊಟ್ಟಿದ್ದರು. ಜೇಲಿನಿಂದ ಕೊಡುವ ಆಹಾರದಲ್ಲಿ ಈ ಸ್ಥಾನಬದ್ದರಿಗೆ ಶಿಕ್ಷೆ ಆದ ಕೈದಿಗಳಿಗೆ ಕೊಡುತ್ತಿದ್ದ ಊಟದಕಿಂತ ತುಸು ಹೆಚ್ಚು ಪದಾರ್ಥಗಳನ್ನೂ ಪೂರೈಸುತ್ತಿದ್ದರು. ಮೇಲಾಗಿ ಇವರಿಗೆ ಕೆಲಸವಿದ್ದಿಲ್ಲ. ರಾಟಿಯ ಮೇಲೆ ನೂಲುವದು ಪುಸ್ತಕ ವರ್ತಮಾನಪತ್ರ ಓದುವದು, ಇಸ್ಪೇಟ ಆಡುವದು, ಹರಟೆ ಹೊಡೆಯುವದು, ತಮ್ಮ ಅಡಿಗೆ ತಾವೇ ಮಾಡಿಕೊಳ್ಳುವದು ಮುಂತಾದರಲ್ಲಿ ಅವರ ವೇಳೆ ಸಹಜವಾಗಿ ಹೋಗುವಂತಿತ್ತು. ಅಡಿಗೆ ಮಾಡಲು ಶಿಕ್ಷೆ ಆದ ಕ್ರಿಮಿನಲ್ ಕೈದಿಗಳನ್ನೂ ಕೊಟ್ಟಿದ್ದರು. ಬೇಕಾದಷ್ಟು ಪತ್ರ ಬರೆಯಲಿಕ್ಕೂ ತರಿಸಲಿಕ್ಕೂ ಪ್ರತಿಬಂಧವಿದ್ದಿಲ್ಲ. ಗುದುಗಿನ ಶ್ರೀ. ಆನಂತರಾವ ಜಾಲಿಹಾಳ ವಕೀಲರು ಮಧ್ವರಾವ ಜೋಶಿ ವಕೀಲರು ಹುಕ್ಕೇರಿ, ಮತ್ತು ಶ್ರೀ. ಆಧ್ಯಾಪಕ ಇವರು ಎಲ್ಲ ಸ್ಥಾನಬದ್ಧರ ಅಡಿಗೆ ಒಂದೆಡೆ ಆಗುವಂತೆಯೂ ಅದನ್ನು ಚನ್ನಾಗಿ ಮಾಡುವಂತೆಯೂ ಉತ್ಸಾಹದಿಂದ ಹೊಣೆಗಾರಿಕೆ ಹೊತ್ತು ಅದನ್ನು ಕಡೆತನಕ ಉತ್ತಮವಾಗಿ ನೀಗಿಸಿದರು,

ಡಾಕ್ಟರ ಹಣಮಂತರಾವ ತೆರಗುಂಡಿಯವರು ಚಳವಳಿಯಲ್ಲಿ ಪ್ರತ್ಯಕ್ಷ ಭಾಗವಹಿಸದೆ ಎಲೆಯ ಮರೆಯಲ್ಲಿಯ ಹೂವಿನಂತೆ ಕಾರ್ಯಕರ್ತರಿಗೆ ಅನೇಕ ರೀತಿಯಿಂದ ಸಹಾಯ ಸಲ್ಲಿಸುತ್ತಿದ್ದರು, ಅವರ ಹಿರಿಯ ಮಗಳ ಮದುವೆ ಇದೇ ಕಾಲಕ್ಕೆ ನಡೆಯಿತು, ಜೇಲಿನಲ್ಲಿಯ ತಮ್ಮ ಬಾಂಧವರ ಕಡೆಗೆ ಅವರ ಲಕ್ಷ್ಯವಿತ್ತು. ಅಂತೆಯೇ ಅವರು ಮದುವೆಯ ಫರಾಳ ಅಂತ ನೂರಾರು ಉಂಡಿ, ಕರಚೀಕಾಯಿ, ಚಿರೋಟಿ, ಚಕ್ಕಲಿ, ಚಿವುಡಾ ಮುಂತಾದವುಗಳನ್ನು ಸ್ಥಾನಬದ್ಧರ ಹೆಸರಿನಿಂದ ಜೇಲಿಗೆ ಕಳಿಸಿದರು. ಈ ಫರಾಳದ ತಿನಸನ್ನು ಯುಕ್ತಿಯಿಂದ ಒಳಗಿನ ನಮ್ಮ ಶಿಕ್ಷೆ ಹೊಂದಿದ ಕೈದಿಗಳಿಗೆ ತುಸು ತಸು ಮುಟ್ಟುವ ವ್ಯವಸ್ಥೆಯನ್ನು ನಮ್ಮ ಸ್ಥಾನಬದ್ಧರು ಮಾಡಿದರು.

ತಮಗೆ ಜೇಲಿನಿಂದ ಸಿಗುತ್ತಿದ್ದ ರೇಶನ್‌ದಲ್ಲಿ ಉಳಿತಾಯ ಮಾಡಿ ಪ್ರತಿ ತಿಂಗಳಿಗೆ ಅಥವಾ ಎರಡು ತಿಂಗಳಿಗೊಮ್ಮೆ ಒಳಗಿನ ನಮ್ಮ ರಾಜಬಂದಿಗಳಿಗೆ ಕಡಬು ಉಂಡಿ, ಜಿಲೇಬಿ ಮುಂತಾದವುಗಳನ್ನು ಮಾಡಿ ಒಬ್ಬೊಬ್ಬರಿಗೆ ಒಂದೊಂದಾದರೂ ಬರುವಂತೆ ಗೋಡೆಯಿಂದ ಗೋಡೆಗೆ ಜಿಗಿದು ಅಥವಾ ವಾರ್ಡರರ ಮುಖಾಂತರ ಹಂಚುವ ಕೆಲಸವನ್ನೂ ಆಗಾಗ ನಮ್ಮ ಸ್ಥಾನಬದ್ಧರು ಮಾಡುತ್ತಿದ್ದರು.

ಶ್ರೀ. ಶಂಕರರಾವ ಕಾಮತ (ಬೈಲಹೊಂಗಲ), ಶಂಕರರಾವ (ಅಣ್ಣಪ್ಪ) ಪದಕಿ (ಸವದತ್ತಿ) ಇವರೂ ಆಗ ಸ್ಥಾನಬದ್ಧತೆಯಲ್ಲಿದ್ದರು. ಇವರಿಬ್ಬರೂ ಶ್ರೀಮಂತರೂ ಉದಾರಿಗಳೂ ಆಗಿದ್ದರು. ದಿನಾಲು ಇವರು ನೂರಾರು ಬಂಡಲ ಬೀಡಿಗಳನ್ನು ಹೊರಗಿನಿಂದ ತರಿಸುತ್ತಿದ್ದರು, ತಾವು ಸೇದುವದು ಅಷ್ಟಕ್ಕಷ್ಟೇ. ಆದರೆ ಜೇಲಿನಲ್ಲಿಯ ಚಟಗಾರ ಕೈದಿಗಳಿಗೆ ತುಸುವಾದರೂ ಸಮಾಧಾನವಾಗುವದಕ್ಕಾಗಿ ಈ ಬಂಡಲುಗಳನ್ನೆಲ್ಲ ಅವರು ಜೇಲಿನಲ್ಲಿಯ ಕೈದಿಗಳಿಗೆ ಹಂಚುತ್ತಿದ್ದರು. ಇದರಿಂದ ಇಡೀ

ಜೇಲಿನಲ್ಲಿ ಇವರಿಬ್ಬರು ಅತ್ಯಂತ ಲೋಕಪ್ರಿಯತೆಯನ್ನು ಸಂಪಾದಿಸಿದರು. ಇವರು ಹೇಳುವ ಯಾವದೇ ಕೆಲಸ ಮಾಡಲು ಕ್ರಿಮಿನಲ ಕೈದಿಗಳು ಸಿದ್ಧರಾಗಿರುತ್ತಿದ್ದರು.

## ಎರಡನೆ ವರ್ಗದ ಸ್ಥಾನಬದ್ಧರ ಸ್ಥಿತಿಗತಿ.

ಎರಡನೇ ವರ್ಗದ ಸ್ಥಾನಬದ್ಧರನ್ನು ಮುಖ್ಯವಾಗಿ ೨ ನೇ ನಂಬರ ಸರ್ಕಲದಲ್ಲಿ ಇಟ್ಟಿದ್ದರು, ೧ ನೇ ನಂಬರ ಸರ್ಕಲದಲ್ಲಿಯೂ ಕೆಲವರಿದ್ದರು. ಅವರಿಗೆ ಜೇಲಭಿಸಿಯಿಂದಲೇ ಊಟ ಪೂರೈಸಲಾಗುತ್ತಿತ್ತು. ಅವರಿಗೆ ದಿನಾಲು ಮುಂಜಾನೆ ಚಹಾ ಕೊಡುತ್ತಿದ್ದರು. ಊಟಿಕ್ಕೆ ವಾರದಲ್ಲಿ ಎರಡು ಸಲ ( ಬುಧವಾರ, ರವಿವಾರ ) ಗೋದಿ ರೊಟ್ಟಿ, ಉಳಿದ ದಿನಗಳಿಲ್ಲಿ ಜೋಳದ ರೊಟ್ಟಿ ಕೊಡುತ್ತಿದ್ದರು. ಚಹಾ ಗೋದಿ ರೊಟ್ಟಿ ಬಿಟ್ಟರೆ ಶಿಕ್ಷೆ ಆದ ' ಕ ' ವರ್ಗದ ಕೈದಿಗಳಂತೆಯೇ ೨ ನೇ ವರ್ಗದ ಡೆಟಿನ್ಯೂಗಳ ಆಹಾರ ವಿದ್ದಿತು. ವಾರಕ್ಕೊಂದು ಪತ್ರ ಬರೆಯಲು ವಾರಕೊಮ್ಮೆ ಮನೆಯವರ ಭೆಟ್ಟಿ ತಕ್ಕೊಳ್ಳಲು ಅನುಮತಿ ಇತ್ತು. ಮುಂದೆ ಜೇಲಧಿಕಾರಿಗಳಗೂಡ ಜಗಳವಾಗಿ ಮುಂಜಾನೆಯ ಚಹಾ ಸ್ವತಃ ಮಾಡಿಕೊಳ್ಳಲು ಇವರಿಗೆ ಒಲೆಯ ಅನುಕೂಲತೆ ಮಾಡಿ ಕೊಡಲಾಯಿತು. ರತ್ನಾಗಿರಿಯ ಶ್ರೀ. ಅಪ್ಪಾಸಾಹೇಬ ಪಟವರ್ಧನ ಅವರು ೨ ನೇ ವರ್ಗವನ್ನು ಬೇಡಿ ಇವರೊಂದಿಗೆ ಸರ್ಕಲದಲ್ಲಿ ಇರುತ್ತಿದ್ದರು. ಜೇಲಿನಲ್ಲಿರುವಾಗಲೆ ಶ್ರೀಮತಿ ಸುಶೀಲಾಬಾಯಿ ಕುಲಕರ್ಣಿಯವರು ಮ್ಯಾಟ್ರಿಕ ಪರೀಕ್ಷೆ ಪಾಸಾದದ್ದು ತಿಳಿದಾಗ ಶ್ರೀ. ಜಯದೇವ ಕುಲಕರ್ಣಿಯವರು ೨ ನೇ ವರ್ಗದ ಸ್ಥಾನಬದ್ಧರಿಗೆ ಹಾಗು ಶಿಕ್ಷೆ ಆದ ರಾಜಬಂದಿಗಳಿಗೆ ಉಂಡಿ ಊಟ ಹಾಕಿಸಿದ್ದರು. ಅವರನ್ನು ವಿಸಾಪೂರ ಜೇಲಿನಿಂದ ೧೯೪೪ ಜಾನೇವಾರಿಯಲ್ಲಿ ಪುನ: ಹಿಂಡಲಗಿ ಜೇಲಿಗೆ ತಂದ ನಂತರ ಅವರು ಮತ್ತು ಶ್ರೀ. ಸದಾಶಿವರಾವ ಪರಾಂಜಪೆಯವರು ರುಚಿಕರ ಅಡಿಗೆ ಮಾಡಿ ೧ ನೇ ಹಾಗೂ ೨ ನೇ ವರ್ಗದ ಸ್ಥಾನಬದ್ಧರಿಗೆ ಒತ್ತಟ್ಟಿಗೆ ಊಣ ಬಡಿಸುತ್ತಿದ್ದರು. ರುಚಿಕರವಾದ ಅಡಿಗೆ ಮಾಡುವದರಲ್ಲಿ ಇವರಿಬ್ಬರೂ ಪಳಗಿದವರಾದುದರಿಂದ ೧ ನೇ ವರ್ಗದಲ್ಲಿಯ ಮುಖಂಡರು ಜೇಲಧಿಕಾರಿಗಳ ಪರವಾನಗಿ ಪಡೆದು ಆಗಾಗ ಇವರಿಬ್ಬರನ್ನು ತಮ್ಮಲ್ಲಿಗೆ ಬರಮಾಡಿಕೊಂಡ್ ಭೋಜನ ಕೂಟ ನಡೆಯಿಸುತ್ತಿದ್ದರು. ಜೇಲು ವಾಸದ ಕೊನೆಯ ದಿನಗಳು ಇಂತು ಸರಾಗವಾಗಿ ಸಾಗಿದವು.

## ಅತಾತ್ವಿಕವಾದರೂ ಅತ್ಯಗತ್ಯ.

ಬಂಧಿಸಲ್ಪಟ್ಟ ಮೇಲೆ ಶ್ರೀ. ಅಣ್ಣುಗುರೂಜಿಯವರ ಮೇಲೆ ಯಾವುದೋ ಒಂದು ಖಿಟ್ಲೆ ಹಾಕಿ ೭ ತಿಂಗಳ ಶಿಕ್ಷೆ ವಿಧಿಸಲಾಯಿತು. ಆಗ ಅವರು ಹಿಂಡಲಗಿ ಜೇಲಿನ ೨ ನೇ ಸರ್ಕಲಿನಲ್ಲಿದ್ದರು. ಶಿಕ್ಷೆ ಮುಗಿದ ನಂತರ ಬಿಡುಗಡೆಯಾಯಿತು. ಆದರೆ ಜೇಲಿನ ಬಾಗಿಲದಲ್ಲಿಯೇ ಪೋಲೀಸರು ಅವರನ್ನು ಪುನಃ ಬಂಧಿಸಿ ಸ್ಥಾನಬದ್ಧತೆಯಲ್ಲಿಟ್ಟರು. ಸುಮಾರು ೨ ವರುಷ ಅವರು ಸ್ಥಾನಬದ್ಧತೆಯಲ್ಲಿದ್ದರು. ಈ ಅವಧಿಯಲ್ಲಿ ಶ್ರೀ. ಕುರುಳಕರ

ಎಂಬ ಜೇಲರರು ಇದ್ದರು. ವಿಚಿತ್ರ ಸ್ವಭಾವದ ಈ ವ್ಯಕ್ತಿಯನ್ನು ನೋಡುತ್ತಲೆ ರಾಜ ಬಂದಿಗಳಿಗೆ ನಗೆ ಬರುತ್ತಿತ್ತು. ದಿನಾಲು ಮುಂಜಾನೆ ಎದ್ದ ಕೂಡಲೆ ಸ್ನಾನಬದ್ಧರ ಬರಾಕಿಗೆ ಗೀತೆಯ ಶ್ಲೋಕಗಳನ್ನು ಅನ್ನುತ್ತ ಬರುವ ಪರಿಪಾಠ ಅವರದಿತ್ತು. ಅಣ್ಣು ಗುರೂಜಿಯವರ ಮುಂದೆ ಬಂದು " ಸತ್ಯಂ ವದ ಧರ್ಮಂ ಚರ " ಎಂದು ಅಂದವರೇ " ನೀವು ಬೀಡಿ ಸೇದುವಿರಾ ? " ಎಂದು ಪ್ರಶ್ನಿಸುತ್ತಿದ್ದರು. ಅದಕ್ಕೆ ಅವರು " ನಾನು ಸ್ನಾನಬದ್ಧನಾಗಿರುವೆ, ನನಗೆ ಬೀಡಿ ಸೇದಲು ಅಧಿಕಾರವಿಲ್ಲವೇ ? " ಎಂದು ಮರು ಪ್ರಶ್ನೆ ಹಾಕುತ್ತಿದ್ದರು. ಆಗ ಅವರು—" ನೀವು ಬೀಡಿ ಸೇದುವದಿಲ್ಲೆಂಬದು ನನಗೆ ಗೊತ್ತಿದೆ. ನಾನು ಆ ಬಗ್ಗೆ ಪ್ರತಿಜ್ಞಾಪೂರ್ವಕವಾಗಿ ಹೇಳಬಲ್ಲೆ. ನಿನ್ನೆ ನಿಮ್ಮ ಹೆಸರಿನಿಂದ ೧೦ ಸಾವಿರ ಬೀಡಿ ಯಾರೋ ತಂದು ಇಟ್ಟಿದ್ದಾರೆ. ಆದ್ದರಿಂದ ನಾನು ನಿಮಗೆ ಕೇಳುತ್ತಿದ್ದೇನೆ. ಹೇಳಿರಿ ನೀವು ಬೀಡಿ ಸೇದುವಿರೋ ? " ಎಂದು ತಿರುತಿರುಗಿ ಪ್ರಶ್ನೆ ಹಾಕುತ್ತಿದ್ದರು. ಅಣ್ಣು ಗುರೂಜಿಯವರು ಮತ್ತೆ ಅದೇ ಉತ್ತರ ಕೊಡುತ್ತಿದ್ದರು, ಆಗ ಅವರು " ನೀವು ಖಂಡಿತ ಸೇದುವದಿಲ್ಲ, ಉಳಿದವರಿಗೆ ಅವನ್ನು ಪೂರೈಸುತ್ತೀರೆಂದು ಸಂಶಯವಿದೆ. " ಎಂದು ಅನ್ನುತ್ತಿದ್ದರು. ಅದಕ್ಕೆ ಅಣ್ಣು ಗುರೂಜಿಯವರು—" ಹಾಗೆ ಮಾಡುವಾಗ ನನ್ನನ್ನು ಹಿಡಿದು ಖಿಟ್ಟೆ ಹಾಕಬಹುದು. ನಾನು ಬೀಡಿ ಸೇದುವೆನೋ ಇಲ್ಲವೋ ಎಂಬದನ್ನು ನಿಮಗೆ ಕೇಳಲು ಬರಲಾರದು. ಬೀಡಿ ತರಿಸಲಿಕ್ಕೆ ನನಗೆ ಅಧಿಕಾರ ವಿದೆ ಆದ್ದರಿಂದ ಸುಮ್ಮನೆ ಆ ಬೀಡಿಗಳನ್ನು ನನ್ನ ಕಡೆಗೆ ಕಳಿಸಿರಿ. " ಎಂದು ಹೇಳುತ್ತಿದ್ದರು, " ಸತ್ಯಂ ವದ ಧರ್ಮಂ ಚರ " ಅನ್ನುತ್ತ ಜೇಲರರು ತಿರುಗಿ ಹೋಗಿ ಆ ಬೀಡಿಗಳನ್ನು ಒಳಗೆ ಕಳಿಸುತ್ತಿದ್ದರು. ಅವನ್ನು ಅಣ್ಣು ಗುರೂಜಿಯವರು ಅವರವರಿಗೆ ಮುಟ್ಟಿಸುತ್ತಿದ್ದರು. ಹೀಗ ಯಾವಾಗಲೂ ನಡದೇ ಇತ್ತು.

ಒಮ್ಮೆ ಶ್ರೀ, ಅಧ್ಯಾಪಕರು " ಈ ಸಾರೆ ಒಂದು ಚಲೋ ಊಟ ಮಾಡಿಸತಕ್ಕದ್ದಿದೆ. ಸಾಮಾನು ತರಿಸಿಕೊಡಬೇಕು. " ಎಂದು ಶ್ರೀ. ಜೋಶಿ ನಾರಾಯಣರಾಯರಿಗೆ ಕೇಳಿದರು. " ಬೇಕಾದ ಸಾಮಾನು ತರಿಸಿಕೊಳ್ಳಿರಿ. " ಎಂದು ನಾರಾಯಣರಾಯರು ಒಪ್ಪಿದರು. ಆಗ ಅಧ್ಯಾಪಕರು ರವಾ, ಸಕ್ಕರೆ, ತುಪ್ಪ, ಯಾಲಕ್ಕಿ ಮುಂತಾದ ಸಾಮಾನಿನ ಜೊತೆಗೆ ೧೦ ಸಾವಿರ ಬೀಡಿಗಳನ್ನೂ ಬರೆದು ತರಿಸಿಕೊಂಡರು. ಆ ಸಾಮಾನುಗಳ ಬೆಲೆ ಕೊಡುವಾಗ ಶ್ರೀ. ನಾರಾಯಣರಾಯರು ಯಾದಿ ನೋಡಿದರು. ಅದರಲ್ಲಿ ಬೀಡಿ ೧೦ ಸಾವಿರ ಅಂತ ಇತ್ತು. ಆಗ ನಾರಾಯಣರಾಯರು ಅಧ್ಯಾಪಕರಿಗೆ—" ಅಧ್ಯಾಪಕರೇ ನಿಮಗೆ ಬೇಕಾದಷ್ಟು ಅಕ್ಕಿ, ತುಪ್ಪ, ಸಕ್ಕರಿ ಮುಂತಾದವುಗಳನ್ನು ನನ್ನ ಹೆಸರಿನಿಂದ ತರಿಸಿಕೊಳ್ಳಿರಿ. ಆದರೆ ಬೀಡಿ ಸಿಗರೇಟು ಮುಂತಾದವುಗಳನ್ನು ನನ್ನ ಹೆಸರಲೆ ದಯವಿಟ್ಟು ತರಿಸಬೇಡಿರಿ. " ಎಂದು ಕೇಳಿಕೊಂಡರು. ಶ್ರೀ, ನಾರಾಯಣರಾಯರಂಥವರಿಗೆ ಇದು ಸರಿಯೇ ಇತ್ತು. ಆದರೆ ಒಳಗಿನ ದುರ್ಬಲ ಜನರು ಕ್ಷಮಾಯಾಚನೆ ಮಾಡಿ ಹೊರಗೆ ಹೋಗಬಾರದೆಂದು ಅಣ್ಣು ಗುರೂಜಿಯಂಥವರಿಗೆ ಕೆಲವು ಅತಾತ್ವಿಕ ಕಾರ್ಯಗಳನ್ನು ಜೇಲಿನಲ್ಲಿ ಮಾಡಬೇಕಾಯಿತು,